ಈ ಹುದ್ದೆ 1988 ರಿಂದ ಖಾಲಿ ಇರುತ್ತದೆ. ನೇರ ನೇಮಕಾತಿಯಿಂದ ಹಾಗೂ ಸ್ನಾತಕೋತ್ತರ ವಿದ್ಯಾಭ್ಯಾಸದಿಂದ ಹಿಂತಿರುಗುವ ದಂತ ವೈದ್ಯರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ : ರಾಯಚೂರು ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 477 (786 - ಎ)

ಶ್ರೀ. ಕೆ.ಭೀಮಣ್ಣ (ಕಲ್ಮಲಾ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಯಚೂರು ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ ಎಷ್ಟು ?

2. ಈ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ 500ಕ್ಕೆ ಹೆಚ್ಚಿಸಿ, ಅನೇಕ ವಿಶೇಷ ಸೌಲಭ್ಯಗಳ ಅನುಕೂಲತೆಯನ್ನು ಒದಗಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರ ವಿದೇಶ ರಾಷ್ಟ್ರಗಳ ನಿಧಿಯಿಂದ ರಾಜ್ಯಕ್ಕೆ ಧನ ಸಂದಾಯ ನೀಡಲು ಮುಂದೆ ಬಂದಿರುವುದು ನಿಜವಲ್ಲವೆ ?

3. ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು ಹಾಗೂ ಅವುಗಳಾವುವು?

ಡಾ ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

1) ಹಾಸಿಗೆಗಳ ಸಂಖ್ಯೆ 130 ಇರುತ್ತದೆ. ರಾಜ್ಯ ಸರ್ಕಾರದಿಂದ ಹೊಸದಾಗಿ 120 ಹಾಸಿಗೆಗಳು ಮಂಜೂರಾಗಿದ್ದು, ಕಟ್ಟಡ ಪೂರ್ತಿಯಾಗಿದೆ. ಹೆಚ್ಚುವರಿ ಸಿಬ್ಬಂದಿಯೂ ಮಂಜೂರಾಗಿದ್ದು, ಅವುಗಳ ಕಾರ್ಯಾರಂಭಕ್ಕೆ ಕ್ರಮ ಕೈಗೊಳ್ಳಲಾಗಿದೆ.

2) ನಿಜ.

3) ರಾಯಚೂರು ಜಿಲ್ಲಾ ಆಸ್ಪತ್ರೆಯನ್ನು ಸ್ಥಳಾಂತರಿಸಲು ಹಾಗೂ ಮೇಲ್ದರ್ಜೆಗೇರಿಸಲು 31 ಕೊಟಿ ರೂ. ಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ಕೇಂದ್ರ ಸರ್ಕಾರದ ಹಾಗೂ 'ಓಪೆಕ್'ಫಂಡಿನ ಅನುಮೋದನೆಗಾಗಿ ಈಗಾಗಲೇ ನವದೆಹಲಿಗೆ ಕಳುಹಿಸಲಾಗಿದೆ.

ವಿಷಯ : ಕುಪ್ಪಳ್ಳಿ ಪ್ರದೇಶವನ್ನು ರಕ್ಷಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 478 (230)

ಶ್ರೀ. ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) :- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?